**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.**
S.C.5063/2023

ದಿಃ06.11.2025
CW-2 PW-1

| | |
|---|---|
| ಹೆಸರು | : ಸಂತೋಷ್ |
| ತಂದೆಯ ಹೆಸರು | : ದೇಶಿಲಿಂಗೇಗೌಡ |
| ವಯಸ್ಸು | : 23 ವರ್ಷ |
| ಉದ್ಯೋಗ | : ಡ್ರೈವರ್ |
| ವಾಸ | : ಕಪನಿಗೌಡನದೊಡ್ಡಿ ಗ್ರಾಮ |

**(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)**
**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ನನಗೆ ಚಾಸಾ-1ರವರು ಗೊತ್ತು. ಸುಮಾರು ಒಂದುವರೆ ವರ್ಷಗಳ ಹಿಂದೆ ಚಾಸಾ-1ರವರು ತೀರಿಕೊಂಡಿರುತ್ತಾರೆ. ನನಗೆ ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ನಾನು ನ್ಯಾಯಾಲಯದ ಮುಂದಿರುವ ಆರೋಪಿತರು ಹಾಗೂ ಚಾಸಾ-1ರವರ ನಡುವೆ ನಡೆದ ಗಲಾಟೆಯನ್ನು ನಾನು ನೋಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರು ಚಾಸಾ-1ರವರಿಗೆ ಬಂದೂಕಿನಿಂದ ಗುಂಡು ಹಾರಿಸಿರುವುದನ್ನು ನಾನು ನೋಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಮತ್ತು ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಿದೆ)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ದಿಃ06.12.2021ರಂದು ರಾತ್ರಿ 10-15 ಗಂಟೆ ಸಮಯದಲ್ಲಿ ನಾನು ಚಾಸಾ-1ರವರ ಮನೆಯ ಬಳಿ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಅದೇ ದಿನ ಸಂಜೆ 7-00 ಗಂಟೆ ಸಮಯದಲ್ಲಿ ಪ್ರದೀಪ್‌ರವರಿಗೆ ಸೇರಿದ ನಾಯಿ ಮರಿಗೆ ದೊಡ್ಡಆಲಹಳ್ಳಿ ಕಡೆಯಿಂದ ಒಂದು ಕಾರು ಕನಕಪುರದ

ಕಡೆಗೆ ಹೋಗುವಾಗ ನಾಯಿ ಮರಿಗೆ ಗುದ್ದಿಸಿಕೊಂಡು ಹೋಗಿದ್ದರಿಂದ, ನಾಯಿ ಮರಿಗೆ ಏಟಾಗಿದ್ದು, ಆ ಸಮಯದಲ್ಲಿ ಚಾಸಾ-1ರವರು ಕಾರಿನವರಿಗೆ ನಿಧಾನವಾಗಿ ಹೋಗಬೇಕಲ್ಲವೆ ಎಂದು ಬುದ್ಧಿ ಮಾತನ್ನು ಹೇಳಿದಾಗ, ಕಾರಿನವರು ನಿಧಾನವಾಗಿ ಹೋಗುತ್ತೇವೆಂದು ಹೇಳಿ ಹೊರಟು ಹೋಗಿರುವ ವಿಚಾರ ಚಾಸಾ-1ರವರಿಂದ ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ. ಅದೇ ದಿನ ರಾತ್ರಿ 10-00 ಗಂಟೆ ಸಮಯದಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿತರು ಅವರ ಚಾಸಾ-1ರವರಿಗೆ ಫೋನ್ ಮಾಡಿ ಕಿರುಚಾಡಿ ನಿನಗೊಂದು ಗತಿ ಕಾಣಿಸುತ್ತೇವೆಂದು ಹೇಳಿರುವ ವಿಚಾರ ನನಗೆ ಚಾಸಾ-1ರವರಿಂದ ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ಅದೇ ದಿನ ರಾತ್ರಿ 10-30 ಗಂಟೆ ಸಮಯದಲ್ಲಿ ನಾನು ಹಾಗೂ ಚಾಸಾ-1ರವರು ಅವರ ಮನೆಯ ಬಳಿ ನಿಂತಿರುವಾಗ ಆರೋಪಿತರು ಕೆಎ-05-ಜೆಪಿ-0619 ಮೋಟರ್ ಸೈಕಲ್‌ನಲ್ಲಿ ಬಂದು ಚಾಸಾ-1ರವರ ಎದೆಗೆ ಬಂದೂಕನ್ನು ಹಿಡಿದು ನಿನ್ನನ್ನು ಸಾಯಿಸಿಬಿಡುತ್ತೇವೆಂದು ಹೇಳಿ ಫೈರ್ ಮಾಡುವಷ್ಟರಲ್ಲಿ ಚಾಸಾ-1ರವರು ಹೆದರಿಕೊಂಡು ಪಕ್ಕಕ್ಕೆ ಸರದಿದ್ದು, ನಂತರ ಬಂದೂಕು ಫೈರ್ ಆಗಿರುತ್ತದೆ. ನಂತರ ನಾನು ಹಾಗೂ ಚಾಸಾ-1ರವರು ಹೆದರಿಕೊಂಡು ಮನೆಯ ಹತ್ತಿರ ಓಡಿ ಹೋಗಿರುತ್ತೇವೆ ಎಂದರೆ ಸರಿಯಲ್ಲ. ನಂತರ ಆರೋಪಿತರು ಗಾಡಿಯಲ್ಲಿ ಮತ್ತೊಂದು ಗುಂಡು ಹಾರಿಸಿ ಬೈಕ್ ಸಮೇತ ಹೊರಟು ಹೋಗಿರುತ್ತಾರೆಂದರೆ ಸರಿಯಲ್ಲ. ಚಾಸಾ-1 ಹಾಗೂ ಆರೋಪಿ-1 ರವರ ನಡುವೆ ಈ ಮೊದಲಿನಿಂದಲೂ ದ್ವೇಷ ಇದ್ದುದರಿಂದ, ಆರೋಪಿತರು ಚಾಸಾ-1ರವರನ್ನು ಕೊಲೆ ಮಾಡುವ ಉದ್ದೇಶದಿಂದ ಬಂದೂಕಿನಿಂದ ಗುಂಡು ಹಾರಿಸಿರುವ ವಿಚಾರ ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ. ನಾನು ಈ ಮೇಲೆ ತಿಳಿಸಿದಂತೆ ದಿಃ08.12.2021ರಂದು ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ತಾನು ಒಪ್ಪಿಕೊಳ್ಳದ "ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತೇನೆ..................ಮುಂದಿನ

ದಿನಗಳಲ್ಲಿಯೂ ಗುರುತಿಸುತ್ತೇನೆ” ಎಂಬ ಹೇಳಿಕೆ ಭಾಗವನ್ನು ನಿಪಿ-1 ಎಂದು ಗುರುತಿಸಲಾಯಿತು. ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಹಾಗೂ ಘಟನೆಯನ್ನು ಕಣ್ಣಾರೆ ನೋಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಕೆಎಂಆರ್, ಆರೋಪಿತರ ಪರ ವಕೀಲರಿಂದ - ಇರುವುದಿಲ್ಲ.**

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.

**ಪಾಟೀ ಸವಾಲು:** ಆರೋಪಿತರ ಪರ ವಕೀಲರು ಗೈರು, ಆರೋಪಿತರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಯಾವುದೇ ಸಮಂಜಸ ಕಾರಣ ನೀಡದಿದ್ದ ಕಾರಣ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲು:** 1ನೇ ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು 2ನೇ ಆರೋಪಿ ಪರ ವಕೀಲರು ಮಾಡಿದ ಪಾಟೀಸವಾಲಿನಂತೆ ಇರುತ್ತದೆ ಎಂದು ತಿಳಿಸಿ ಅವರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ತೆರೆದ ನ್ಯಾಯಾಲಯದಲ್ಲಿ ಎರಡೂ ಪಕ್ಷಗಳವರ ಸಮಕ್ಷಮ ಒಂದು ಸೀಲಾದ ಬಿಳಿ ಬಟ್ಟೆಯ ಚೀಲವನ್ನು ತೆರೆದು ನೋಡಲಾಗಿ ಅದರಲ್ಲಿರುವ ಒಂದು ರಕ್ತಕಲೆಯಾದ ಹಸಿರು ಬಿಳಿ ಬಣ್ಣದ ಶರ್ಟನ್ನು ನೋಡಿ ಗುರುತಿಸಿದ್ದು, ಸದರಿ ರಕ್ತಕಲೆಯಾದ ಹಸಿರು ಬಿಳಿ ಬಣ್ಣದ ಶರ್ಟನ್ನು ಎಂಓ-28 ಎಂದು ಗುರುತಿಸಲಾಯಿತು.